


# ಇಸ್ರೇಲಿನಲ್ಲಿ ಗಾಲ್ ಸಂಚಾರಿ ಘಟಕ

ಕಡಲ ನೀರನು ಕುಡಿಯಲು ಮತ್ತು ಕೃಷಿ ಬಳಕೆಗೆ ಶುದ್ಧೀಕರಿಸುವ ನಿಟ್ಟಿನಲ್ಲಿ ಇಸ್ರೇಲ್ ಹಲವು ಕ್ರಾಂತಿಕಾರಿ ಹೆಜ್ಜೆಗಳನ್ನು ಇಟ್ಟಿದೆ. ಅಲ್ಲಿ ಈ ಕುರಿತ ತಂತ್ರಜ್ಞಾನ ವಿಸ್ತರಣೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಹೊಸ ತಂತ್ರಜ್ಞಾನವನ್ನು ಹಲವು ದೇಶಗಳ ಜತೆಗೂ ಇಸ್ರೇಲ್ ಹಂಚಿಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಇಸ್ರೇಲ್‌ನ ಮೆಡಿಟರೇನಿಯನ್ ಸಮುದ್ರದ ಓಲ್ಗಾ ಕಿನಾರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಾಲ್ ನೀರು ಶುದ್ಧೀಕರಣ ಸಂಚಾರಿ ಘಟಕ ಅತ್ಯಂತ ಮಹತ್ವದ್ದು.

ಇದು ಸಮುದ್ರದ ನೀರಿನಲ್ಲಿರುವ ಲವಣಾಂಶವನ್ನು ತೆಗೆದು ಶುದ್ಧೀಕರಿಸುವ ಸಂಚಾರಿ ಶುದ್ಧೀಕರಣ ಘಟಕ. ಸಂಪೂರ್ಣ ಶುದ್ಧೀಕರಣ ಘಟಕವನ್ನೇ ಹೊತ್ತುಕೊಂಡು ಗಾಲ್ ಜೀಪ್ ಸಂಚರಿಸುವುದು ಅತ್ಯಂತ ವಿಶೇಷವಾಗಿ ಗಮನಿಸಬೇಕಾದ ಅಂಶ. ಗಾಲ್ ಸಂಚಾರಿ ಶುದ್ಧೀಕರಣ ಜೀಪ್‌ಅನ್ನು ಉತ್ತಮ ಗುಣಮಟ್ಟದೊಂದಿಗೆ ಲವಣಯುಕ್ತ ನೀರನ್ನು ಸ್ವತಂತ್ರವಾಗಿ ಮತ್ತು ಸಮಗ್ರವಾಗಿ ಕುಡಿಯುವ ನೀರನ್ನಾಗಿ ಪರಿವರ್ತಿಸುವ ಘಟಕವನ್ನಾಗಿ ತಯಾರಿಸಿರುವುದು ಇದರ ವಿಶೇಷತೆಗಳಲ್ಲೊಂದು.

ಈ ಜೀಪ್ ಪ್ರಾಕೃತಿಕ ವಿಕೋಪಗಳಾದ ಪ್ರವಾಹ, ಸುನಾಮಿ, ಭೂಕಂಪದ ಸಂದರ್ಭಗಳಲ್ಲಿ ಹಾಗೂ ಕಠಿಣ ಭೂಪ್ರದೇಶಗಳ ಸೈನಿಕ ಕಾರ್ಯಾಚರಣೆಯ ಸಂದರ್ಭದಲ್ಲಿ ಶುದ್ಧ ನೀರನ್ನು ಒದಗಿಸಿಕೊಡುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಬಲ್ಲದು.

ಈ ಗಾಲ್ ಜೀಪ್‌ನ ಸಂಪೂರ್ಣ ತಯಾರಿಕೆ ಮತ್ತು ಮಾರುಕಟ್ಟೆಯ ಹಕ್ಕುಗಳನ್ನು (ಪೇಟೆಂಟ್) ಗಾಲ್ ವಾಟರ್ ಟೆಕ್ನಾಲಜೀಸ್ ಸಂಸ್ಥೆಯು ಹೊಂದಿದೆ. ಫೆಬ್ರವರಿ 2015ನೇ ಇಸವಿಯಲ್ಲಿ ಈ ಜೀಪ್‌ನ್ನು ಗಾಲ್ ವಾಟರ್ ಟೆಕ್ನಾಲಜೀಸ್ ಸಂಸ್ಥೆಯು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಪ್ರಪಂಚದಲ್ಲೇ ಈ ಬಗೆಯ ನೀರು ಶುದ್ಧೀಕರಣ ಘಟಕ ಪ್ರಥಮವೆನ್ನಬಹುದು.

ಈ ಯಂತ್ರವು ದಿನದಲ್ಲಿ ಸುಮಾರು 20,000 ಲೀಟರ್ ಸಮುದ್ರದ ನೀರನ್ನು ಮತ್ತು 80,000 ಲೀಟರ್‌ನಷ್ಟು ಕೆಸರು, ಮಣ್ಣಿನಿಂದ ಕೂಡಿದ ಕಲುಷಿತ ನೀರನ್ನು (ವಿಶ್ವ ಆರೋಗ್ಯ ಸಂಸ್ಥೆಯು ನಿಗದಿಪಡಿಸಿದ ಗುಣಮಟ್ಟಕ್ಕೆ ಅನುಗುಣವಾಗಿ) ಶುದ್ಧೀಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಇಸ್ರೇಲ್‌ನ ಹಳ್ಳಿಗಾಡು, ಯುದ್ಧಪೀಡಿತ ಹಾಗೂ ತುರ್ತು ಪರಿಸ್ಥಿತಿ ಇರುವ ಪ್ರದೇಶಗಳಿಗೆ ಶುದ್ಧ ನೀರನ್ನು ಪೂರೈಸುವ ಅನನ್ಯ ಹಾಗೂ ಸಮಗ್ರ ಮಾರ್ಗವಾಗಿ ಕಾರ್ಯನಿರ್ವಹಿಸುತ್ತಿದೆ. ಲಭ್ಯವಿರುವ ಯಾವುದೇ ನೀರಿನ ಮೂಲವನ್ನು ಯಾವುದೇ ಸಮಯದಲ್ಲಿ ಹಾಗೂ ಯಾವುದೇ ಸ್ಥಳಕ್ಕೆ ತ್ವರಿತವಾಗಿ ತಲುಪಿಸುವ ಬಹು ಮುಖ್ಯವಾದ ಧ್ಯೇಯೋದ್ದೇಶವನ್ನು ಈ ಯಂತ್ರವು ಹೊಂದಿದೆ. ಇಸ್ರೇಲ್‌ನ ಈ ವಿಶಿಷ್ಟ ತಂತ್ರಜ್ಞಾನವು ಪ್ರಪಂಚದ